Regd No M 1229 | 43rd Year | Sri 'Satyavadi' Mysore | 5—3—1959

Doc 14
T.P.2

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಂಸ್ಥೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿಗೆ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಮೈಸೂರು ಪ್ರಾಂತದಲಿ ಆರ್ಥಿಕ ಕಾರ್ಪೊರೇಷನ್ ಸ್ಥಾಪನೆ

ಹೈ ಕೋರ್ಟಿಗೆ ವ್ಯಾಪ್ತಿಯಿಲ್ಲ

ಕಲ್ಕತ್ತಾ 3 — ನೆಹರು – ನೂನ್ ಒಪ್ಪಂದದ ಪ್ರಕಾರ ಪಾಕಿಸ್ತಾನಕ್ಕೆ ಬಿಡುಬಾರಿ ವರ್ಗಾವಣೆ ಸಂಬಂಧದಲ್ಲಿ ಪ್ರೊ|| ನಿರ್ಮಲ ಬೋಸರು ಆಕ್ಷೇಪವನ್ನೆತ್ತಿ ಸಲ್ಲಿಸಿರುವ ಅರ್ಜಿಯನ್ನು ಅದರ ಮೇಲೆ ಕಲ್ಕತ್ತಾ ಹೈಕೋರ್ಟಿಗೆ ವ್ಯಾಪ್ತಿಯಿಲ್ಲವೆಂದು ಭಾರತದ ಅಟಾರ್ನಿ ಜನರಲ್ ಶ್ರೀ ಎಂ ಸಿ ಸೆಟಲ್ವಾಡರು ಕಲ್ಕತ್ತಾ ಹೈಕೋರ್ಟಿನಲ್ಲಿ ತಿಳಿಸಿದರು

ಜೇಕಬ್ಬುಲ್ಲರೊಡನೆ ಭೇಟಿ

ಕರಾಚಿ 4 — ಕಾಶ್ಮೀರ ವಿಷಯ ಕುರಿತು ಚರ್ಚೆ ತಿಳಿಸಲು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಡ್ಯಾಗ್ ಹ್ಯಾಮರ್ಷೀಲ್ಡ್‌ನು ನಿರಾಕರಿಸಿದರು ಕಾಶ್ಮೀರದಲ್ಲಿ ತಾವು ಸರ್ಕಾರ ನಾಯಕರನ್ನು ಕಂಡು ಪೇಕ್ಬುಲ್ಲ ಮುಂತಾದವರ ಭೇಟಿವಹಿಡುವದಿಲ್ಲವೆಂದು ಅವರು ತಿಳಿಸಿದರು

ಬೊಂಬಾಯಿ ವಿಂಗಡಿಸಿ

ಬೊಂಬಾಯಿ 4 — ಬೊಂಬಾಯಿ [illegible] ಬೊಂಬಾಯಿ ನಗರ, [illegible] ವಿದರ್ಭ ಮತ್ತು ಗು[illegible] ವಿಂಗಡಿಸಬೇಕೆಂದು [illegible] ಕಾಂಗ್ರೆಸು ಸದಸ್ಯ [illegible] ತಿಳಿಸಿದರು

ಸಾಹಿತಿಯಿಂದ ಮರಣ

ಕೋಲಂಗಲ್ 4 — [illegible] ಗ್ರಾಮ [illegible] ಶಾಸಕರೂ ಪ್ರಸಿದ್ಧ ಗೋಕೀ [illegible] ಮರಣಹೊಂದಿದ್ದಾರೆ

ಕಾನ್ಪುರ 3 — ನಿನ್ನೆ ವಿದ್ಯಾರ್ಥಿ [illegible] ಮೆರವಣಿಗೆಯು ಲಾಠಿ [illegible] ಪ್ರತಿಭಟಿಸಿ ವಿದ್ಯಾರ್ಥಿಗಳು ಈ ದಿನ ಹರತಾಳ ನಡೆಸಿದರು

ಬೆಂಗಳೂರು 4 — ಪ್ರಾಂತ ಆರ್ಥಿಕ ಕಾರ್ಪೊರೇಷನ್ ಸ್ಥಾಪಿಸಲು ಮೈಸೂರು ಸರ್ಕಾರ ನಿರ್ಧರಿಸಿದೆಯೆಂದೂ ಒಂದೆರಡು ದಿನಗಳಲ್ಲಿ ಈ ಬಗ್ಗೆ ಆಜ್ಞೆ ಹೊರಡುವದೆಂದೂ ವಿಧಾನ ಸಭೆಯಲ್ಲಿ ಅರ್ಥ ಮಂತ್ರಿ ಶ್ರೀ ಟಿ ಮರಿಯಪ್ಪನವರು ತಿಳಿಸಿದರು

ಕರಾಚಿ 3 — ಸಮಾಜ ಘಾತಕ ಒಳಸಂಚುಗಳ ವಿರುದ್ಧ ಪಾಕಿಸ್ತಾನದ ಸೇನಾ ಆಡಳಿತ ಆಜ್ಞೆ ಹೊರಡಿಸಿದೆ

ಹೈದರಾಬಾದು 3 — ಪ್ರತಿಪಕ್ಷ ನಾಯಕರನ್ನು ಶತ್ರುಗಳೆಂದು ಕರೆಯುವುದು ಆಪಾರ್ಲಿಮೆಂಟರಿ ಅಲ್ಲವೆಂದು, ಆದರೆ ಅದರ ಉಪಯೋಗ ಮಾಡದೆ ಪ್ರತಿಪಕ್ಷದವರೆಂದು ಕರೆಯಬಹುದೆಂದು ಸ್ಪೀಕರ್ ಸೂಚಿಸಿದರು

ಬೆಂಗಳೂರು 4 — ಪಾನನಿಷೇಧ ಬಂದ್ ಆಗಬೇಕೆಂದು ವಿಧಾನ ಸಭೆಯಲ್ಲಿ ಪಿಎಸ್ಪಿ ಸದಸ್ಯ ಶ್ರೀ ಎಂ ಲಿಂಗೇಗೌಡರು ತಿಳಿಸಿದರು

ವಾರಂಗಲ್ 3 — ಕಾಶಿ ಹಿಂದೂ ವಿಶ್ವವಿದ್ಯಾನಿಲಯದ ಆಯುರ್ವೇದ ಕಾಲೇಜು ಮತ್ತೆ ಆರಂಭವಾಯಿತು

ಬೆಂಗಳೂರಿನಲ್ಲಿ ಸಮಾವೇಶವಾಗಿರುವ ವಿಧಾನ ಪರಿಷತ್ತಿನಲ್ಲಿ, ಸಂತಾನ ನಿರೋಧ ಕ್ರಮಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕೆಂದು ನಿನ್ನೆ ಸದಸ್ಯರು ತಿಳಿಸಿದರು

ಜಾರಿಯಾ 4 — ಸರ್ಕಾರಿ ಗಿಂಧಿ ಕಲ್ಲಿಜ್ಜಲು ಗಣಿಯಲ್ಲಿ ವಿಷವಾಯು ಹಂದಿದ ಕಾರಣ 4 ಜನ ಕಾರ್ಮಿಕರು ಮರಣಹೊಂದಿದರು

ಹೈದರಾಬಾದು 4 — ಪಂಜಾಬು ಪ್ರಾಂತದಲ್ಲಿ ಕಾನೂನುಭಂಗ ಚಳುವಳಿಯನ್ನು ಸೋಪಲಿಸ್ಪು ಪಕ್ಷ ವಾಪಸು ಪಡೆದಿದೆ

ಉದ್ಘಾಟನೆ ಮಂತ್ರಿ ನೇಮಿಸಿ

ಹೈದರಾಬಾದು 3 — ಉದ್ಘಾಟನೆ ಮತ್ತು ಮುಕ್ತಾಯ ಸಮಾರಂಭಗಳಿಗೇ ಮಂತ್ರಿಯೋರ್ವರ ನೇಮಕ ಆಗಬೇಕೆಂದು ಶ್ರೀ ಎ. ರಾಜೇಶ್ವರರಾವ್ ಅವರು ದಾಜಪಟ್ಟಿಯ ಮೇಲೆ ಮಾತನಾಡುತ್ತಾ ಆಂಧ್ರ ವಿಧಾನ ಸಭೆಯಲ್ಲಿ ತಿಳಿಸಿದರು.

5 ಅಕ್ಷರ ಬದಲಾವಣೆ ಆಗತ್ಯ

ತುಮಕೂರು ಪ್ರಥಮ ದರ್ಜೆ ಕಾಲೇಜಿನ ತೆಲುಗು ಸಾಹಿತ್ಯ ಸಂಘದ ಸಮಾರೋಪ ಭಾಷಣಮಾಡುತ್ತಾ ಪ್ರೊ|| ಸುಬ್ಬರಾಮಪ್ಪನವರು ತೆಲುಗು–ಕನ್ನಡ ಏಕಲಿಪಿಗೆ ಐದು ಅಕ್ಷರ ಬದಲಾವಣೆ ಆಗತ್ಯವೆಂದರು.

ಸರ್ವಾಧಿಕಾರ ಮಾರ್ಗ

ಬೆಳಗಾಂ 2 — ಭೂ ಸುಧಾರಣೆ ಕ್ರಮ ಸರ್ವಾಧಿಕಾರಕ್ಕೆ ದಾರಿಮಾಡಿಕೊಡುವದೆಂದು ಇಲ್ಲಿ ಸಮಾವೇಶವಾಗಿದ್ದ ಭೂ ಹಿಡುವಳಿದಾರರ ಸಮ್ಮೇಳನ ನಿರ್ಣಯಿಸಿದೆ

ಬೆಂಕಿಯಿಂದ ಮರಣ

ಹೊಸ್ಪೇಟೆ 2 — ಹೊಸ್ಪೇಟೆ-ಧಾರವಾಡ ರಸ್ತೆಯಲ್ಲಿ ಶನಿವಾರ ಅಗ್ನಿ ಅನಾಹುತವಾಗಿ 44 ಗುಡಿಸಲುಗಳು ಭಸ್ಮವಾಗಿ 2 ಮಕ್ಕಳು ಸತ್ತವು

ಸಂರಕ್ಷಣೆ ಮೂಲ

ಮಾಲೂರು 2 — ರೈತರನ್ನು ಧನ ಸಂರಕ್ಷಣೆ ಮಾಡುತ್ತದೆ. ರೈತರು ಹೇಶವನ್ನು ಸಂರಕ್ಷಣೆ ಮಾಡುವರು ಎಂದು ಕೇಂದ್ರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಮಾಲೂರು ತಾಲ್ಲೂಕಿನ ಶಿವಂಪಟ್ಟಣದಲ್ಲಿ ಪ್ರಾಣಿ ಆಸ್ಪತ್ರೆ ಆರಂಭಿಸುತ್ತಾ ತಿಳಿಸಿದರು

ವಿವಿಧ ವಿಷಯಗಳು

ಮೈಸೂರಿನಕಾಯಿಯನ್ನು ವ್ಯವಸಾಯ ಆದಾಯ ತೆರಿಗೆಯಿಂದ ವಿನಾಯಿತಿಪಡಿಸಬೇಕೆಂದು ವಿಧಾನ ಸಭೆ ಸದಸ್ಯರಾದ ಶ್ರೀ ಜಿ. ಬಿ. ಶಂಕರರಾಜುರು ವಿನಂತಿ ಮಾಡಿಕೊಂಡರು ಈ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲನೆಮಾಡುವದಾಗಿ ಮುಖ್ಯ ಮಂತ್ರಿಗಳು ಭರವಸೆ ಇತ್ತರು

ರಾಯಚೂರು ಜಿಲ್ಲೆಯು ಮುನೀರಾಬಾದ್ ಸಾಲಾರ್ ಜಂಗ್ ಸಕ್ಕರೆ ಕಾರ್ಖಾನೆಯಲ್ಲಿ ಆದ ಮುಷ್ಕರದ ಸಂಬಂಧದಲ್ಲಿ 151 ಮನುಷ್ಯ ಕೆಲಸ ದಿನಗಳು ನಷ್ಟವಾದವೆಂದು ಮೈಸೂರಿನ ಕಾರ್ಮಿಕ ಅಧಿಕಾರಿಗಳು ಬೆಂಗಳೂರಿನಲ್ಲಿ ನಿನ್ನೆ ಪ್ರಕಟಿಸಿದ್ದಾರೆ

ಮಡಿಕೇರಿ 1 — ಮೈಸೂರಿನ ಪಾನನಿಷೇಧ ಮಂತ್ರಿ ಶ್ರೀ ಎಸ್ ರಾಜಯ್ಯನವರು ಇಲ್ಲಿ ಹೇಳಿಕೆಯೊಂದರಲ್ಲಿ ಹೊರ ಜನರು ವ್ಯಾಪಾರವೆಗೆ ಮಾಡುವದನ್ನು ನಿಲ್ಲಿಸಬೇಕೆಂದು ತಿಳಿಸಿದರು.

ಮಾರ್ಚಿ 12 ನೇ ತಾ|| ನಿಂದ 15 ನೇ ತಾ|| ವರಿಗೆ ಕರ್ನಾಟಕಪ್ರಾಂತ ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನ ದಾವಣಗೆರೆಯಲ್ಲಿ ಸಮಾವೇಶವಾಗುವದು.

ಬೆಂಗಳೂರಿನಲ್ಲಿ ನಿನ್ನೆ ಸಮಾವೇಶವಾಗಿದ್ದ ಮೈಸೂರು ಶಾಸನ ಸಭೆ ಕಾಂಗ್ರೆಸು ಪಕ್ಷ ಆಹಾರ ಸಂಗ್ರಹಣೆ ನೀತಿಯೊಂದಿಗೆ ಆಹಾರ ಪರಿಸ್ಥಿತಿ ಕುರಿತು ಚರ್ಚಿಸಿತು.

ಹೆಚ್ಚು ಆಹಾರ ಬೆಳೆಯುವ ಪ್ರೇರಣೆಯುಂಟಾಗಲು ರೈತರಿಗೆ ಪರಿಹಾರ ಒದಗಿಸುವ ಬಗ್ಗೆ ಮೈಸೂರು ಸರ್ಕಾರ ಪರಿಶೀಲಿಸುತ್ತಿದೆ.

ಸಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪಕ್ಕೃಷ್ಣಜೋಯಿಸರಿಂದ
6 ದ್ವಾದಶಿ ಶ್ರವಣ

ಸರ್ವೋದಯತತ್ವ

(ಮುಂದುವರಿದುದು)

ರಷ್ಯಾ, ಅಮೇರಿಕಾ, ಇಂಗ್ಲೆಂಡು ದೇಶಗಳಲ್ಲಿ ಇರುವಂತೆ ದೇಶಭಕ್ತಿಯು ನಮ್ಮಲ್ಲಿ ಬೆಳೆದಿಲ್ಲ ; ಸಾಮೂಹಿಕ ಕುಟುಂಬ ಆಥವಾ ವ್ಯವಸಾಯ ಪದ್ಧತಿಯು ನಮ್ಮ ದೇಶದಲ್ಲಿ ಜನಪ್ರಿಯವಾಗಿಲ್ಲ ; ಪ್ರತಿಯೊಬ್ಬನೂ ತನ್ನ ತನ್ನ ವೈಯಕ್ತಿಕ ಲಾಭದಲ್ಲೇ, ಸುಖಸಂತೋಷದಲ್ಲೇ ಆಸಕ್ತನಾಗುತ್ತಾನೆ ; ನಷ್ಟವಾದರೆ ದುಃಖಿಸುತ್ತಾನೆ : ತನ್ನ ವೈಯಕ್ತಿಕ ಲಾಭವಿಲ್ಲವೆಂದು ಕಂಡಾಗ ಆ ಕಾರ್ಯದಲ್ಲಿ ಉದಾಸೀನನಾಗುತ್ತಾನೆ ; ಇದು ಮನುಷ್ಯನ ಸಾಮಾನ್ಯವಾದ ದೋಷ ; ಈ ಮಟ್ಟದಿಂದ ಮೇಲಿನ ಮಟ್ಟಕ್ಕೆ ಮನಸ್ಸು ಏರಬೇಕಾದರೆ ಭಾವನೆ ವಿಶಾಲವಾಗಿಂಬೇಕು ; ತನ್ನಂತೆ ಇತರರು, ತನ್ನ ಸುಖದುಃಖಗಳು ಎಂಬ ಭಾವನೆ ಮೂಡಿದರೆ ಮಾತ್ರ ಹೃದಯವು ವಿಶಾಲವಾಗುವುದು ; ಇತರ ದೇಶಗಳಂತೆ ನಮ್ಮ ದೇಶವಿಲ್ಲ ; ಇಲ್ಲಿ ಧರ್ಮಕ್ಕೂ ದೇವರಿಗೂ ಅತ್ಯಂತ ದೊಡ್ಡಸ್ಥಾನವಿದೆ ; ಧರ್ಮದ ತಳಹದಿಯ ಮೇಲೆಯೆ ನಮ್ಮ ಹಿರಿಯರು ಅತ್ಯುನ್ನತವೀರತೆಯ ಸುಂದರ ಸೌಧವನ್ನು ಕಟ್ಟಿದ್ದಾರೆ : ದೇವರನ್ನು ಮುಂದೆಮಾಡಿಕೊಂಡು, ಧರ್ಮವನ್ನು ಜೊತೆ ಮಾಡಿಕೊಂಡು, ಭಯಭಕ್ತಿಗಳ ಎರಡು ದಂಡೆಗಳ ಮಧ್ಯದಲ್ಲಿ ನಮ್ಮ ಜೀವನ ಪ್ರವಾಹವನ್ನು ನಿಯಮಿತವಾಗಿ ನಡೆಸಲ್ಪಡುವ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ

ನಮ್ಮ ಜೀವನದ ಅಡಿಗಲ್ಲೆ ಧರ್ಮ ; ಧರ್ಮವು ಐದು ವಿಧ : ವ್ಯಕ್ತಿಧರ್ಮ, ಸಮಾಜಧರ್ಮ, ಗ್ರಾಮಧರ್ಮ, ರಾಷ್ಟ್ರಧರ್ಮ, ಶಿಷ್ವಿಧರ್ಮ ; ಪ್ರತಿಯೊಬ್ಬ ಮನುಷ್ಯನೂ ಯಾವ ಕ್ರಮದಿಂದ ನಡೆದರೆ ಮತ್ತೊಬ್ಬನಿಗೆ ತೊಂದರೆಯಾಗದಂತೆ ತಾನೂ ಸುಖವಾಗಿದ್ದು ಇತರರನ್ನೂ ಸುಖವಾಗಿರಿಸಬಲ್ಲ ಜೀವನ ನಿರ್ವಹಣದ ನಿಯಮವೋ ಅದು ವ್ಯಕ್ತಿಧರ್ಮ : ಇಂತಹ ಅನೇಕ ವ್ಯಕ್ತಿಗಳಿಂದ ಕೂಡಿದ ಸಮಾಜವು ಶಾಂತಿಯಿಂದ ಇರುವ ಅನೇಕ ಸಮಾಜಗಳ ಸುಖಕ್ಕೆ ಶಾಂತಿಗೆ ಅಡ್ಡಿಬರದಂತೆ ನಡೆಯುವ ನಿಯಮವು ಸಮಾಜಧರ್ಮ : ಇಂತಹ ಅನೇಕ ಸಮಾಜಗಳಿಂದ ಗ್ರಾಮವು ಇತರ ಗ್ರಾಮಗಳೊಡನೆ ಶಾಂತಿ ಪ್ರೇಮಗಳಿಂದ ವರ್ತಿಸಿದರೆ ಅಲ್ಲಿಂದ ಇಂತ ಅನೇಕ ಗ್ರಾಮಗಳು ರಾಷ್ಟ್ರವನ್ನು ನಿರ್ಮಾಣಮಾಡಿದರೆ ಇಂತಹ ಅನೇಕ ರಾಷ್ಟ್ರಗಳ ಧ್ಯೇಯವು ಜಗತ್ತಿನ ಸಮಸ್ತ ಮಾನವಕುಲದ ಸುಖಶಾಂತಿಗಳನ್ನು ಅಪೇಕ್ಷಿಸುವುದಾದರೆ, ಅದು ವಿಶ್ವಧರ್ಮ : ವ್ಯಕ್ತಿಯಿಂದ ಹಿಡಿದು ವಿಶ್ವದ ಸಮಸ್ತ ಪ್ರಾಣಿಗಳಿಗೂ ಒಡೆಯನಾದ ಅಣುರೇಣು ತೃಣಕಾಷ್ಠ ಪರಿಪೂರ್ಣನಾದ ವಿಶ್ವವ್ಯಾಪೀ ವಿಶ್ವೇಶ್ವರನೆ ನಿಶ್ಶಾಧಿಪತಿ : ಅವನೇ ಧರ್ಮಕ್ಕೆ ಪ್ರಭುವಾದ ಅಚ್ಯುತನು. [ಸೇ. ಸ]

SHAKTI
SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅಶೋಕಾ ಫಾರ್ಮಸಿ
ಅಶೋಕ್ ರಸ್ತೆ ಬಜಾರ್ ಮೈಸೂರು

For Quality Printing

L. N. Press
Sivarampet, Mysore

ವುಡ್‌ಲ್ಯಾಂಡ್ಸ್ ವೈಭವ 5 ನೇ ವಾರ

ಎಷ್ಟು ಸಾರಿ ನೋಡಿದರೂ ಮತ್ತೆಮತ್ತೆ ನೋಡಬೇಕೆನ್ನಿಸುವ ಚಿತ್ರರತ್ನ

ದಿಲ್ಲೀ – ಕ – ಥಗ್ (ಹಿಂದಿ)

ತಾರಾಗಣ- ನೂತನ್, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಸಂಗೀತಪೂರ್ಣ ಹಾಸ್ಯಮಯ ಚಿತ್ರ — ನೀರಿನ ನೃತ್ಯಗಳು ಗೀವಾಕಲರಿನಲ್ಲಿ

ಅಪೆರಾ— 1-3-59 ರಿಂದ

ಮಾಧವಿ

ನಟವರ್ಗ— ಎಸ್. ಜಾನಕಿ, ದೇವಿಕ, ಮನೋಹರ

ಮನಮೋಹಕ ತಮಿಳು ಚಿತ್ರ — — ಪ್ರತಿದಿನ 3 ಆಟಗಳು

ಬೊಂಬಾಯಿನಲ್ಲಿರುವ ಭಾರತದ ಅಳವಾದ ವಿಮಾನ ಹಿಡಿಯುವ ಸೈಪ್ರಸ್ ಭಾರತಕ್ಕೆ ಬಂದಿರುವ ಅಮೇರಿಕಾದ ಟೆಕ್ನಿಕಲ್ ಕಾಪೊರೇಷನ್ ವಿಮಾನಸ್ಟರ್-ಡೈರೆಕ್ಟರ್ ವಿ || ಹವರ್ಡ್ ಹೂಪ್ಸ್‌ನ್ನರು ಆಧುನಿಕ ವಿಮಾನ ಹಿಡಿಯುವ ಟ್ರಾಲರ್‌ನ್ನು ಫೆಬ್ರವರಿ 5 ರಂದು ಬಹುಮಾನಿಸಿದರು.

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯುತ್ತಿರುವ
ಗೋರಕ್ಷಣ ಪತ್ರಿಕೆಗೆ ಜೊತೆಲಿಗರಾಗಿರಿ.

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ದ್ವಿ
ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚ ಕ್ಕೂ ರೂ 5 ಆಗ
ಪೋಷಕರು ರೂ 25, ಪೆಂಬಲಿಗರು ರೂ 10 (ಒಂದೇಸಾರಿ) ವ

Edited, Printed & Published by Dharma Prachara N
Krishna Rao, at the Satyavadi Press Channapatna